PW-8
CW-13

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.154/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುಳಮ್ಮ |
| ತಂದೆಯ/ಗಂಡನ ಹೆಸರು | : | ಗುರುಪಾದಯ್ಯ ಮಠದ್ |
| ವಯಸ್ಸು | : | 40 ವರ್ಷ |
| ಉದ್ಯೋಗ | : | Women police constable, Honnali Police Station |
| ವಾಸ ಸ್ಥಳ | : | Honnali |

ಪಿ.ಡಬ್ಲ್ಯೂ 8

ಸಿ.ಡಬ್ಲ್ಯೂ 13

ದಿ: 10-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ನ್ಯಾಮತಿ ಪೋಲೀಸ್ ಠಾಣೆ ಯಲ್ಲಿ 2021 ರಿಂದ 2024 ರ ವರಗೆ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ದಿನಾಂಕಃ 09-03-2023 ರಂದು ಹಗಲು ಕರ್ತವ್ಯದಲ್ಲಿ ಇರುವಾಗ, ನ್ಯಾಮತಿ ಪೋಲೀಸ್ ಠಾಣೆ ಗುನ್ನೆ ನಂಬರ್ 38/2023 ರಲ್ಲಿ ತನಿಖಾದಿಕಾರಿಗಳು ಕರೆದು ಮಹಿಳಾ ಆಪಾದಿತರು ಇದ್ದಾರೆ ಪತ್ತೆ ಮಾಡಲು ನನಗೂ ಹಾಗೂ ಚಾಸಾ-14 ರವರಿಗೂ ನೇಮಿಸಿರುತ್ತಾರೆ. ಅದರಂತೆ ನಾವು ನ್ಯಾಮತಿ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಜರೇಕಟ್ಟೆ ಗ್ರಾಮಕ್ಕೆ ಹೋಗಿ ಈ ಪ್ರಕರಣದ ಆರೋಪಿಯಾದ ಲತಾ ರವರ ಮನೆಯ ಹತ್ತಿರ ಹೋಗಿ ವಿಚಾರಣೆಯನ್ನು ಮಾಡಿರುತ್ತೇವೆ. ಅಲ್ಲಿ ಆರೋಪಿಯು ದಾರಿಯಲ್ಲ್ ನಡೆದುಕೊಂಡು ಹೋಗುತ್ತಿದಾರೆಂದು ಅವರ ಮನೆಯಲ್ಲಿ ಇದ್ದ ಮಹಿಳೇ ಹೇಳಿದರು. ನಾವು ಅದೇ ಮಾರ್ಗವಾಗಿ ಕುಂಕುವ ಗ್ರಾಮಕ್ಕೆ ಬಂದೆವು. ಅಲ್ಲಿ ಬಸ್ ಸ್ಟಾಂಡ್ ಸರ್ಕಲ್ ನಲ್ಲಿ ಕೇಳಿದಾಗ ಮುಸೇನಾಳ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾರೆಂದು ತಿಳಿಸಿದರು,

<u>PW-8</u>
CW-13

ನಾವು ಅದೇ ರಸ್ತೆಯಲ್ಲಿ ಹೋದೆವು. ಅಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಗೆ ವಿಚಾರಿಸಲಾಗಿ ಅವರೇ ಈ ಪ್ರಕರಣದ ಆರೋಪಿ ಎಂದು ಖಚಿತಪಡಿಸಿಕೊಂಡು ಅವರನ್ನು ಕರೆದುಕೊಂಡು ಬಂದು ನ್ಯಾಮತಿ ಪೋಲೀಸ್ ಠಾಣೆ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದೆವು. ಸದರಿ ಆರೋಪಿ ಈ ದಿನ ಗೈರು ಹಾಜರಿದ್ದು ಅವರನ್ನು ಗುರುತಿಸಲು ತಕಾರಾರು ಇಲ್ಲ ಅಂತ ಆರೋಪಿಪರ ವಕೀಲರು ನುಡಿದಿರುತ್ತಾರೆ.

**(ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು. )**
**ಮದ್ಯಾಹ್ನ 3-30 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>**ಪಾಟೀ ಸವಾಲುಃ ಶ್ರೀ MNM, ವಕೀಲರಿಂದ ಆರೋಪಿತರ ಪರವಾಗಿ**</u>:

2. ಆ ದಿನ ನಾವು ಯಾವ ಸ್ಥಳಕ್ಕೆ ಹೋದ ಬಗ್ಗೆ ನಮ್ಮ ದಿನಚರಿ ಡೈರಿಯಲ್ಲಿ ನಮೂದು ಮಾಡಿದ್ದೇನೆ. ನಾನು ಆ ದಿನ ಕುಂಕುವ ಗ್ರಾಮಕ್ಕೆ ಹೋಗಿರಲಿಲ್ಲ, ಪೋಲೀಸ್ ಠಾಣೆ ಯಲ್ಲಿಯೇ ಇದ್ದೆ ಎಂದರೆ ಸರಿಯಲ್ಲ. ನನ್ನೊಂದಿಗೆ ಆ ದಿನ WPC ಕವಿತಾಬಾಯಿ ರವರು ಇದ್ದರು. ಘಟನೆ ಸಂಬಂಧ ಮಾಹಿತಿ ತನಿಖಾದಿಕಾರಿಗಳಿಗೆ ಇರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ನಾನು ಮಾಡಿಲ್ಲ ಠಾಣೆಯಲ್ಲಿಯೇ ಎಲ್ಲಾ ದಾಖಲೆಗಳನ್ನು ಮಾಡಲಾಗಿದೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ**</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-8
CW-13